# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 137 |
| ವಿಧಾನ ಪರಿಷತ್ತು ಸದಸ್ಯರು | ಶ್ರೀ ವೈ.ಎಂ. ಸತೀಶ್<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 14.02.2024 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಕಂದಾಯ ಇಲಾಖೆಯಿಂದ ಡಿಜಿಟಲ್ ವ್ಯವಸ್ಥೆಯಡಿ ಡ್ರೋಣ್ ಸರ್ವೆ ಕಾರ್ಯವನ್ನು ಮಾಡುತ್ತಿರುವುದು ನಿಜವೇ; ಹಾಗಿದ್ದಲ್ಲಿ, ಯಾವ ಯಾವ ಜಿಲ್ಲೆಗಳಲ್ಲಿ ಈ ಕಾರ್ಯ ನಡೆಯುತ್ತಿದೆ; (ಮಾಹಿತಿ ನೀಡುವುದು) | ಹೌದು<br>ಜಿಲ್ಲಾವಾರು ಪಟ್ಟಿಯನ್ನು **ಅನುಬಂಧ-1** ರಲ್ಲಿ ನೀಡಿದೆ. |
| ಆ) | ಕಂದಾಯ ಇಲಾಖೆಯ ಈ ಡ್ರೋಣ್ ಸರ್ವೆ ಕಾರ್ಯದಲ್ಲಿ ಭೂ ದಾಖಲೆಗಳಲ್ಲಿರುವ ವಿಸ್ತೀರ್ಣಕ್ಕಿಂತ ಹೆಚ್ಚಿನ ವಿಸ್ತೀರ್ಣವನ್ನು ತೋರಿಸುತ್ತಿರುವುದಾಗಿ ಮತ್ತು ಇದರಿಂದಾಗಿ ವಾಸ್ತವವಾಗಿರುವ ಆಸ್ತಿಗಳ ವಿಸ್ತೀರ್ಣದಲ್ಲಿ ಏರುಪೇರು ಆಗುತ್ತಿರುವುದು ನಿಜವೇ; ಹಾಗಿದ್ದಲ್ಲಿ, ಪೂರ್ಣ ಮಾಹಿತಿ ನೀಡುವುದು; | ಡ್ರೋಣ್ ಮುಖಾಂತರ ಹಾಲಿ ಇರುವ ಜಮೀನಿನಂತೆ Photo Image ನ್ನು Processing ಮಾಡಿ Ortho Rectified Image ನ್ನು ಪಡೆಯಲಾಗುವುದು ಮತ್ತು Ground Truthing ಅನ್ನು DGPS Rovers Connected to Continuous Operating Reference Stations (CORS) ಆಧಾರದ ಮೇಲೆ ಅಥವಾ ETS ಮುಖಾಂತರ ಅಳತೆ ಕಾರ್ಯ ಮಾಡುವ ಕಾರಣ ಡ್ರೋಣ್ ತಂತ್ರಜ್ಞಾನಿಂದ ಕೇವಲ ಜಮೀನಿನ ವಾಸ್ತವಾಂಶ ಮಾತ್ರ ORI ಮುಖಾಂತರ ಪಡೆಯಲಾಗುವುದು. Ground Truthing ಸಂದರ್ಭದಲ್ಲಿ ವಾಸ್ತವ ಸ್ಥಿತಿಯಂತೆ ಕ್ರಮ ವಹಿಸಲಾಗುವುದು. |
| ಇ) | ಆಸ್ತಿಗಳ ವಿಸ್ತೀರ್ಣದ ಏರುಪೇರು ಗೊಂದಲವನ್ನು ಸರಿಪಡಿಸಲು ಇಲಾಖೆಯು ಯಾವ ಕ್ರಮ ಕೈಗೊಳ್ಳುತ್ತಿದೆ? (ಸಂಪೂರ್ಣ ವಿವರಗಳನ್ನು ನೀಡುವುದು) | Ground Truthing ಮಾಡಿದ ನಂತರ ಡಿಜಿಟಲ್ ಮಾಧ್ಯಮದಲ್ಲಿ ಸಿದ್ಧಪಡಿಸಲಾದ ಭೂದಾಖಲೆಗಳು ಮತ್ತು ಕರಡು RTC ಯನ್ನು ಆಸ್ತಿದಾರರಿಗೆ ವಿತರಿಸಲಾಗುತ್ತಿದೆ. ಕರಡು RTC ಯಲ್ಲಿ ಆಸ್ತಿಗಳ ವಿಸ್ತೀರ್ಣದಲ್ಲಿ ಅಥವಾ ಇನ್ನಾವುದೇ ರೀತಿಯ ಮಾಹಿತಿ ವ್ಯತ್ಯಾಸವಿದ್ದಲ್ಲಿ ಅವರುಗಳು ಅಗತ್ಯ ದಾಖಲೆಗಳೊಂದಿಗೆ ನಿಗಧಿತ ದಿನಾಂಕದೊಳಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಒಂದು ವೇಳೆ ವಿಸ್ತೀರ್ಣದ ವ್ಯತ್ಯಾಸದ ಕುರಿತು ಆಕ್ಷೇಪಣೆಗಳೇನಾದರೂ ಸ್ವೀಕೃತವಾದಲ್ಲಿ ಸಂಬಂಧಪಟ್ಟ ತಾಲ್ಲೂಕಿನ ಭೂದಾಖಲೆಗಳ ಸಹಾಯಕ ನಿರ್ದೇಶಕರು ವಿಚಾರಣಾಧಿಕಾರಿಗಳಾಗಿದ್ದು, ಸ್ವೀಕೃತವಾದ ಆಕ್ಷೇಪಣೆಗಳ ಬಗ್ಗೆ ಅವರ ಹಕ್ಕು ಮತ್ತು ದಾಖಲಾತಿಗಳನ್ನು ಸಮಗ್ರವಾಗಿ ಪರಿಶೀಲಿಸಿ ವಿಚಾರಣೆ ಕೈಗೊಂಡು Speaking ಆದೇಶ ಹೊರಡಿಸುವ ಮೂಲಕ ಅಂತಿಮಗೊಳಿಸಲು ಅವಕಾಶ ಕಲ್ಪಿಸಲಾಗಿದೆ ಮತ್ತು ವಿಚಾರಣೆ ಪ್ರಕ್ರಿಯೆ ಬಗ್ಗೆ ವಿವರವಾದ ಮಾರ್ಗಸೂಚಿಗಳನ್ನು ನೀಡಲಾಗಿದೆ |

**ಸಂಖ್ಯೆ: ಕಂಇ 20 ಎಸ್‌ಎಸ್‌ಸಿ 2024**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು

| ರಾಜ್ಯದಲ್ಲಿ ಡ್ರೋಣ್ ಸರ್ವೆ ಕಾರ್ಯದ ಪ್ರಗತಿ (ಅನುಬಂಧ-1) LAQ 137 | | | |
|---|---|---|---|
| ಕ್ರ.ಸ | ಜಿಲ್ಲೆಯ ಹೆಸರು | ಡ್ರೋಣ್ ಹಾರಾಟ ಪೂರ್ಣಗೊಂಡ ಗ್ರಾಮಗಳು | ಸ್ಥಳ ಪರಿಶೀಲನೆ ಪೂರ್ಣಗೊಂಡಿರುವ ಗ್ರಾಮಗಳು (ಚ.ಕಿ.ಮೀ) |
| 1 | ಹಾಸನ | 1104 | 5001 |
| 2 | ತುಮಕೂರು | 1159 | 4744 |
| 3 | ಬೆಳಗಾವಿ | 122 | 839 |
| 4 | ಉತ್ತರ ಕನ್ನಡ | 0 | 136 |
| 5 | ರಾಮನಗರ | 833 | 3510 |
| 6 | ಕೋಲಾರ | 564 | 1527 |
| 7 | ಚಿಕ್ಕಬಳ್ಳಾಪುರ | 554 | 2854 |
| 8 | ಬಳ್ಳಾರಿ | 307 | 4252 |
| 9 | ವಿಜಯನಗರ | 183 | 3563 |
| 10 | ದಾವಣಗೆರೆ | 673 | 3456 |
| 11 | ಚಿತ್ರದುರ್ಗ | 601 | 6506 |
| 12 | ಕೊಪ್ಪಳ | 180 | 1710 |
| 13 | ಗದಗ | 198 | 3664 |
| 14 | ಚಾಮರಾಜನಗರ | 237 | 1921 |
| 15 | ಚಿಕ್ಕಮಗಳೂರು | 382 | 2346 |
| 16 | ವಿಜಯಪುರ | 312 | 6436 |
| 17 | ಕೊಡಗು | 0 | 0 |
| 18 | ಬೀದರ | 0 | 0 |
| 19 | ರಾಯಚೂರು | 776 | 7330 |
| 20 | ಯಾದಗಿರಿ | 264 | 3955 |
| 21 | ಕಲಬುರಗಿ | 191 | 541 |
| **ಒಟ್ಟು** | | **8640** | **64291** |